ಹಾಡುಗಳು ನೆನಪಾದವು. ಅಲ್ಲಿ ಜೆರುಸಲೇಮಿನ ವಿರಹತಪ್ತರಾದ ಪ್ರೇಮಿಗಳ ಉತ್ಕಟವಾದ ಭಾವನೆಗಳು ವ್ಯಕ್ತವಾಗಿದ್ದು, 'ಇದೇನಿದು? ಬೈಬಲ್ ಪ್ರೇಮಕಾವ್ಯವಾಗಿದೆ' ಎಂಬ ಬೆರಗು ಹುಟ್ಟಿಸುವಂತಿವೆ. ಜೆರುಸಲೇಂ ಪ್ರೇಮಿಗಳ ನಗರವೂ ಆಗಿದೆ.

ಚರಿತ್ರೆಯಲ್ಲಿ ಅಗಲಿದ ಊರು ದೇಶ ಮನೆಗಳು ಕೂಡಿಬಾಳುವ ತಾಣಗಳಾಗುವುದು ಕಷ್ಟ ನಿಜ. ಆದರೆ ಹಂಚಿಕೊಂಡು ಬಾಳುವ ತಾಣಗಳೂ ಆಗಬಾರದೇ? ಇದೇನು ಅಸಾಧ್ಯ ಆದರ್ಶವಲ್ಲ. ಜಗತ್ತಿನ ರಾಜಕಾರಣದಲ್ಲಿ ಸಂಭವಿಸಿರುವ ವಾಸ್ತವಗಳು. ಜೆರುಸಲೇಮಿನ ಆಗಸದಲ್ಲಿ ಹಾರುವ ಹಕ್ಕಿದಂಡನ್ನು ತೋರಿಸುತ್ತ ಮರೀನಾ 'ನೋಡಿ, ಇವಕ್ಕೆ ಪಾಸುಪೋರ್ಟು ವೀಸಾಗಳ ಹಂಗೇ ಇಲ್ಲ' ಎಂದು ಹೇಳಿದಳು. ಗೋಡೆಗಳು ಹುಟ್ಟುವುದು ಮೊದಲು ಮನಸ್ಸುಗಳಲ್ಲಿ. ಬಳಿಕ ಅವು ಭೌತಿಕ ರೂಪದಲ್ಲಿ ಮೇಲೇಳುತ್ತವೆ. ಅವನ್ನು ಮತೀಯ ಸಿದ್ಧಾಂತ ಮತ್ತು ಮೂಲಭೂತವಾದಿ ಧರ್ಮಗಳು ಅನುಲ್ಲಂಘನೀಯ ಮಾಡುತ್ತವೆ.

ಇಸ್ರೇಲ್–ಪ್ಯಾಲಸ್ತೇನ್ ಗೋಡೆಗಳ ಹಿಂದೆ ರಾಷ್ಟ್ರಗಳ ಪಿತೂರಿ ರಾಜಕಾರಣವಿದೆ. ಈ ಗೋಡೆಗಳನ್ನು ಒಡೆಯುವ ಮೊದಲು ಅವನ್ನೂ ಅರ್ಥ ಮಾಡಿಕೊಳ್ಳಬೇಕಿದೆ. ಇಸ್ರೇಲ್ ಭಾಗದ ಗೋಡೆಗಳು ಸ್ವಚ್ಛವಾಗಿವೆ. ಆದರೆ ಗೂನು ಬೆನ್ನಂತೆ ಬಾಗಿದ ಪ್ಯಾಲೆಸ್ಟೈನಿ ಗೋಡೆಗಳೆಲ್ಲ ಕ್ಯಾನ್‌ವಾಸುಗಳಾಗಿವೆ. ಅವುಗಳ ತುಂಬ ಘೋಷಣೆ ಚಿತ್ರ ಕವಿತೆಗಳು. ಒಂದು ಕವಿತೆಯನ್ನು ಮಿತ್ರರಾದ ವಿ.ಎಸ್.ಶ್ರೀಧರ್ ಹಾಗೂ ಚಂದ್ರಕಾಂತ್ ಪತ್ತೆ






## ಗೋಡೆಗಳ ಮೇಲೆ ಜೋಕು!

ಜೆರುಸಲೇಮಿನ ಗೋಡೆಗಳ ಬಗ್ಗೆ ಪ್ಯಾಲೆಸ್ತೀನಿಯರಿಗೆ ಆಕ್ರೋಶವಿದೆ. ಇಸ್ರೇಲ್ ಭಾಗದಲ್ಲೂ ಗೋಡೆದ್ವೇಷಿಗಳಿದ್ದಾರೆ. ಎಂತಲೇ ಗೋಡೆ ಕುರಿತು ನೂರಾರು ಜೋಕುಗಳು ಹುಟ್ಟಿವೆ. ಅದರಲ್ಲಿ ಒಂದು ಹೀಗಿದೆ: ಒಬ್ಬ ಮುದುಕಿ ಉಪ್ಪರಿಗೆಯಲ್ಲಿ ನಿಂತು ಬಗ್ಗಿ ನೋಡುತ್ತಿರುವಾಗ ಹಲ್ಲುಸೆಟ್ಟು ಕೆಳಗೆ ಬಿದ್ದು ಬಿಟ್ಟಿತು. ಅದು ಗೋಡೆಯಾಚೆ ಬಿದ್ದದ್ದರಿಂದ ಎತ್ತಿಕೊಳ್ಳುವಂತಿಲ್ಲ. ಆಕೆ ಪ್ಯಾಲೆಸ್ಟೈನಿನ ಆಡಳಿತಕ್ಕೆ ದೂರು ಸಲ್ಲಿಸಿದಳು. ಪ್ಯಾಲೆಸ್ಟೈನ್ ಅಧಿಕಾರಿಗಳು ಇಸ್ರೇಲಿನ ಅಧಿಕಾರಿಗಳಿಗೆ ದೂರನ್ನು ಮುಟ್ಟಿಸಿದರು. ಇಸ್ರೇಲಿನ ಮಿಲಿಟರಿ ದಂಡನಾಯಕ ಬಂದು ಆಸ್ಫೋಟಕ ತಜ್ಞರಿಂದ ತಪಾಸಣೆ ಮಾಡಿ, ಅಪಾಯಕರವಲ್ಲದ ವಸ್ತುವೆಂದು ಖಚಿತ ಪಡಿಸಿಕೊಂಡು, ಅದನ್ನು ಪ್ಯಾಲೆಸ್ತೇನಿ ಅಧಿಕಾರಿಗಳಿಗೆ ಅಧಿಕೃತ ಕಾರ್ಯಕ್ರಮದಲ್ಲಿ ಹಸ್ತಾಂತರ ಮಾಡಿದ. ಅಲ್ಲಿಂದ ಆ ಮುದುಕಿಗೆ ಅದು ತಲುಪುವಾಗ ಎಷ್ಟೊ ದಿನಗಳು ಕಳೆದವು.

ಇಂತಹ ಜೋಕುಗಳಲ್ಲಿರುವ ವ್ಯಂಗ್ಯವು ಮಾನವರಲ್ಲಿರುವ ಕೂಡಿಬದುಕುವ ಕನಸುಗಳ ಭ್ರೂಣರೂಪ. ಬರ್ಲಿನ್ ಗೋಡೆಯನ್ನು ಒಡೆದಂತೆ ಇದನ್ನೂ ಒಡೆಯುವ ಸುತ್ತಿಗೆಗಳಾಗಿ ಈ ವ್ಯಂಗ್ಯವು ರೂಪಾಂತರವಾಗುವ ಕಾಲ ಬಂದೀತು. ಆದರೆ ಅದು ಹತ್ತಿರವಂತೂ ಇದ್ದಂತಿಲ್ಲ.